13317
Inward No:.............
16 JAN 2023
ಬೆಂಗಳೂರು
★ ಕರ್ನಾಟಕ ರಾಜ್ಯ

6

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕಾರಾಗೃಹ ಮತ್ತು ಸುಧಾರಣೆ ಸೇವೆ ಇಲಾಖೆಯ ಅಧಿಕಾರಿ / ಸಿಬ್ಬಂದಿಗಳಿಗೆ 2021 ನೇ ಸಾಲಿನ ಮುಖ್ಯಮಂತ್ರಿಗಳ ಪದಕ ನೀಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 61 ಪಿಆರ್‌ಇ 2011, ದಿ: 14-08-2013.

2. ಮಹಾನಿರ್ದೇಶಕರು, ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆ, ಬೆಂಗಳೂರು ರವರ ಆದೇಶ ಸಂಖ್ಯೆ: ಇಎಸ್‌ಟಿ.1/ ಸಿಆರ್-75/ 2021, ದಿನಾಂಕ: 01-01-2022.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಕಾರಾಗೃಹ ಇಲಾಖೆಯಲ್ಲಿ ವಿವಿಧ ವೃಂದದ ಅಧಿಕಾರಿ / ಸಿಬ್ಬಂದಿಗಳಿಗೆ ಮಾನ್ಯ ಮುಖ್ಯಮಂತ್ರಿಯವರ ಪದಕ ನೀಡಲು ನಿಯಮಾವಳಿಗಳನ್ನು ರಚಿಸಿ ಅಧಿಕಾರಿ /ಸಿಬ್ಬಂದಿಗಳ ಅಸಾಧಾರಣಾ ಸೇವೆ / ರಾಷ್ಟ್ರೀಯ – ರಾಜ್ಯ ಕ್ರೀಡಾ ವಿಶೇಷತೆ ಮತ್ತು ಇತರ ಉತ್ತಮ ಕಾರ್ಯ ನಿರ್ವಹಿಸುತ್ತಿರುವುದನ್ನು ಪರಿಗಣಿಸಿ, ಇಲಾಖಾ ಮಟ್ಟದಲ್ಲಿ ಸಭೆ ಜರುಗಿಸಿ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ಮಹಾ ನಿರ್ದೇಶಕರು, ಕಾರಾಗೃಹ ಮತ್ತು ಸುಧಾರಣೆ ಸೇವೆರವರು ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ವೃಂದದ 15 ಅಧಿಕಾರಿ / ಸಿಬ್ಬಂದಿಗಳ ಸೇವೆಯನ್ನು ಪರಿಗಣಿಸಿ 2021ನೇ ಸಾಲಿನ ಮಾನ್ಯ ಮುಖ್ಯಮಂತ್ರಿಯವರ ಪದಕಕ್ಕಾಗಿ ವೈಯಕ್ತಿಕ ವಿವರಗಳೊಂದಿಗೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮಹಾ ನಿರ್ದೇಶಕರು, ಕಾರಾಗೃಹ ಮತ್ತು ಸುಧಾರಣೆ ಸೇವೆ, ಬೆಂಗಳೂರು ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ ಹೆಚ್‌ಡಿ 10 ಪಿಆರ್‌ಇ 2022**
**ಬೆಂಗಳೂರು, ದಿನಾಂಕ: 13-01-2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕಾರಾಗೃಹ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಈ ಕೆಳಕಂಡ ವಿವಿಧ ವೃಂದದ ಅಧಿಕಾರಿ / ಸಿಬ್ಬಂದಿಗಳಿಗೆ 2021 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಯವರ ಪದಕ ನೀಡಲು ಸರ್ಕಾರವು ಆದೇಶಿಸಿದೆ.

| ಕ್ರ. ಸಂ | ಹೆಸರು ಶ್ರೀ/ಶ್ರೀಮತಿ | ಪದನಾಮ | ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ |
|---|---|---|---|
| 1 | ವಿ. ಕೃಷ್ಣಮೂರ್ತಿ | ಸಹಾಯಕ ಅಧೀಕ್ಷಕರು | ಕೇಂದ್ರ ಕಾರಾಗೃಹ, ಕಲಬುರಗಿ |
| 2 | ರಾಕೇಶ್ ಕಾಂಬಳೆ | ಸಹಾಯಕ ಅಧೀಕ್ಷಕರು | ಜಿಲ್ಲಾ ಕಾರಾಗೃಹ, ಚಿಕ್ಕಮಗಳೂರು |
| 3 | ಮೌಲಾಲಿ ಕಲಾದಗಿ | ಜೈಲರ್ | ತಾಲ್ಲೂಕು ಉಪಕಾರಾಗೃಹ, ಹೊಸಪೇಟೆ |
| 4 | ಪುಟ್ಟಣ್ಣಾಚಾರಿ | ಸಹಾಯಕ ಜೈಲರ್ | ಜಿಲ್ಲಾ ಕಾರಾಗೃಹ, ಉಡುಪಿ |

...2

771 EST-1 SP (Prisons) 13317 1231

| | | | |
|---|---|---|---|
| 5 | ಯು.ಸಿ. ತೇಜಾವತಿ | ಸಹಾಯಕ ಜೈಲರ್ | ಕೇಂದ್ರ ಕಾರಾಗೃಹ, ಮೈಸೂರು |
| 6 | ಬಸಪ್ಪ ದೇವೆಂದ್ರಪ್ಪ ತೆವರಿ | ಸಹಾಯಕ ಜೈಲರ್ | ಜಿಲ್ಲಾ ಕಾರಾಗೃಹ, ಮಂಗಳೂರು |
| 7 | ರಮೇಶ್ ಎನ್ ಜಿಗರಿ | ಸಹಾಯಕ ಜೈಲರ್ | ಕಾರಾಗೃಹಗಳ ಉಪ ಮಹಾನಿರೀಕ್ಷಕರು, ಉತ್ತರ ವಲಯ, ಬೆಳಗಾವಿ |
| 8 | ಎ. ಪ್ರಕಾಶ್ | ಸಹಾಯಕ ಜೈಲರ್ | ಪ್ರಧಾನ ಕಛೇರಿ, ಬೆಂಗಳೂರು |
| 9 | ಶಿವಸ್ವಾಮಿ ಹೆಚ್.ಎನ್. | ಮುಖ್ಯ ವೀಕ್ಷಕರು | ಜಿಲ್ಲಾ ಕಾರಾಗೃಹ, ಹಾಸನ |
| 10 | ರಾಮು ಎಲ್ ರಾಠೋಡ್ | ಮುಖ್ಯ ವೀಕ್ಷಕರು | ಕೇಂದ್ರ ಕಾರಾಗೃಹ, ಕಲಬುರಗಿ |
| 11 | ಎಸ್.ಆರ್. ಮಣ್ಣೇರಿ | ಮುಖ್ಯ ವೀಕ್ಷಕರು | ಕೇಂದ್ರ ಕಾರಾಗೃಹ, ವಿಜಯಪುರ |
| 12 | ಎಸ್.ಬಿ. ಅಂಗಡಿ | ಮುಖ್ಯ ವೀಕ್ಷಕರು | ಕೇಂದ್ರ ಕಾರಾಗೃಹ, ವಿಜಯಪುರ |
| 13 | ಮಂಜುನಾಥ್ ವಿ ನಾಯ್ಕ | ಮುಖ್ಯ ವೀಕ್ಷಕರು | ಜಿಲ್ಲಾ ಕಾರಾಗೃಹ, ಕಾರವಾರ |
| 14 | ವಿಠ್ಠಲ ಮಲಕಪ್ಪ ಕೊಂಡಗೂಳಿ | ಮುಖ್ಯ ವೀಕ್ಷಕರು | ಜಿಲ್ಲಾ ಕಾರಾಗೃಹ, ಮಂಗಳೂರು |
| 15 | ಇಸ್ಮಾಯಿಲ್ ಜಬೀವುಲ್ಲ | ಮುಖ್ಯ ವೀಕ್ಷಕರು | ಜಿಲ್ಲಾ ಕಾರಾಗೃಹ, ಮಂಗಳೂರು. |

ಮಾನ್ಯ ಮುಖ್ಯಮಂತ್ರಿಯವರ ಪದಕಗಳ ವಿನ್ಯಾಸ ಮತ್ತಿತರೆ ಶಿಷ್ಟಾಚಾರ ಕ್ರಮಗಳನ್ನು ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 61 ಪಿಆರ್‌ಇ 2011, ದಿನಾಂಕ: 14-08-2013 ರಲ್ಲಿರುವಂತೆ ಪಾಲಿಸತಕ್ಕದ್ದು.

ಕಾರಾಗೃಹ ಇಲಾಖೆಯ ಅಧಿಕಾರಿ / ಸಿಬ್ಬಂದಿಗಳಿಗೆ ನೀಡಲಾಗುವ ಮಾನ್ಯ ಮುಖ್ಯಮಂತ್ರಿಯವರ ಪದಕಗಳ ವಿತರಣಾ ಕಾರ್ಯಕ್ರಮವನ್ನು ಆಯೋಜಿಸಲು ಕ್ರಮ ಕೈಗೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

13/11/2023

**(ಬಿ.ಎನ್ ದೇವರಾಜ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಸೆರಮನೆ ಮತ್ತು ಸಿನಿಮಾ)

**ಇವರಿಗೆ:**

ಸಂಕಲನಕಾರರು, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ವಿಕಾಸಸೌಧ, ಬೆಂಗಳೂರು- ರಾಜ್ಯ ಪತ್ರದಲ್ಲಿ ಪ್ರಕಟಣೆಗಾಗಿ.

**ಇವರಿಗೆ:**

1. ಮಹಾಲೇಖಪಾಲರು (ಜಿಎಸ್‌ಎಸ್‌ಎ, ಇ&ಆರ್‌ಎಸ್‌ಎ), ಕರ್ನಾಟಕ, ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಆಪ್ತ ಕಾರ್ಯದರ್ಶಿ ಅವರ ಆಪ್ತ ಕಾರ್ಯದರ್ಶಿಯವರು.
3. ಮಾನ್ಯ ಗೃಹ ಸಚಿವರ ಆಪ್ತ ಕಾರ್ಯದರ್ಶಿಯವರು.
4. ಮಹಾ ನಿರ್ದೇಶಕರು, ಕಾರಾಗೃಹ ಮತ್ತು ಸುಧಾರಣ ಸೇವೆ, ಕರ್ನಾಟಕ, ಬೆಂಗಳೂರು.
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಸಂಬಂದಪಟ್ಟ ಅಧಿಕಾರಿ / ಸಿಬ್ಬಂದಿಗಳಿಗೆ (ಮಹಾ ನಿರ್ದೇಶಕರು, ಕಾರಾಗೃಹ ಮತ್ತು ಸುಧಾರಣ ಸೇವೆ, ಕರ್ನಾಟಕ, ಬೆಂಗಳೂರು ಇವರ ಮುಖಾಂತರ)
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ